30/1

# 2008

## MANAGEMENT

### Paper 1

*Time : 3 Hours ]* *[ Maximum Marks : 300*

---

## INSTRUCTIONS

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* **compulsory**.
*Answer any* **three** *questions in Part D.*

SEAL

---

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

## PART A

*4×5=20*

*Answer each question in about 50 words. Each question carries 5 marks.*

**1.** (a) Discuss organizational behaviour modification (OB Mod) in terms of positive and negative reinforces.

(b) Explain the components of MIS and why it is a service within a company.

(c) What is dynamic programming ?

(d) Why might a firm continue to produce in the short run even though the actual price is less than its average total cost ?

## ಭಾಗ A

*4×5=20*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಿಗೆ ಮೀರದಂತೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

1. (ಎ) ಸಾಂಸ್ಥಿಕ ವರ್ತನಾ ರೂಪಾಂತರವನ್ನು (OB Mod) ಧನಾತ್ಮಕ ಮತ್ತು ಋಣಾತ್ಮಕ ಪುನರ್ಬಲನಗಳ ದೃಷ್ಟಿಯಿಂದ ಚರ್ಚಿಸಿ.

   (ಬಿ) MISನ ಘಟಕಾಂಶಗಳನ್ನು ವಿವರಿಸಿ ಮತ್ತು ಅದು ಸಂಸ್ಥೆಯೊಳಗಿನದೇ ಸೇವೆಯಾಗಿರುವುದೇಕೆ ತಿಳಿಸಿ.

   (ಸಿ) ಚಲನಾತ್ಮಕ ಕಾರ್ಯಕ್ರಮವ್ಯವಸ್ಥೆ ಎಂದರೇನು ?

   (ಡಿ) ಒಂದು ಉದ್ಯಮವು ತನ್ನ ಸರಾಸರಿ ಒಟ್ಟು ವೆಚ್ಚಕ್ಕಿಂತ ವಾಸ್ತವ ಬೆಲೆಯು ಕಡಿಮೆಯಾಗಿದ್ದರೂ ಅಲ್ಪಕಾಲಾವಧಿಯಲ್ಲಿ ಉತ್ಪಾದನೆಯನ್ನು ಮುಂದುವರೆಸಲು ಏಕೆ ಸಾಧ್ಯ ವಾಗಬಹುದು ?

## PART B

*10×10=100*

*Answer each question in about 100 words. Each question carries 10 marks.*

**2.** Compare and contrast the economic rationality model and the social model.

**3.** "Linear programming is a useful technique but has some major limitations." Explain.

**4.** Describe why managers delegate authority and barriers that often prevent them from doing so.

**5.** Explain the concept of cross-elasticity of demand. What are the conditions necessary for two products to be complements, substitutes, and unrelated ?

**6.** Describe the basic nature of groups : the dynamics of group formation and the various types of groups.

**7.** Describe barriers to effective communication. How does empathy help resolve communication problems ?

**8.** How can policy-makers influence a nation's saving rate ?

**9.** Describe and contrast bureaucratic and organic structures. Explain how the environmental factors influence the organizational structure.

**10.** Give a brief description of different measures of central tendency.

**11.** What is the path-goal theory of leadership ? What is the leader's function in the conceptualization ?

## ಭಾಗ B

*10×10=100*

*ಪ್ರತಿಯೊಂದು ಉತ್ತರವೂ 100 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 10 ಅಂಕಗಳು.*

**2.** ಆರ್ಥಿಕ ವಿವೇಚನಶೀಲ ಮಾದರಿ ಮತ್ತು ಸಾಮಾಜಿಕ ಮಾದರಿಯನ್ನು ಹೋಲಿಸಿ ಮತ್ತು ವೈದೃಶ್ಯವನ್ನು ತಿಳಿಸಿ.

**3.** "ರೇಖಾತ್ಮಕ ಕಾರ್ಯಕ್ರಮ ವ್ಯವಸ್ಥೆಯು ಒಂದು ಉಪಯುಕ್ತ ವಿಧಾನ ಆದರೂ ಅದರಲ್ಲಿ ಕೆಲವು ಪ್ರಮುಖ ಮಿತಿಗಳಿವೆ." ವಿವರಿಸಿ.

**4.** ನಿರ್ವಾಹಕರು ಅಧಿಕಾರದ ನಿಯೋಜನೆಯನ್ನು ಏಕೆ ಮಾಡುತ್ತಾರೆ ಮತ್ತು ಅದನ್ನು ಮಾಡದಹಾಗೆ ಕೆಲವೊಮ್ಮೆ ಅವರಿಗೆ ಎದುರಾಗುವ ಅಡಚಣೆಗಳೇನು ?

**5.** ಬೇಡಿಕೆಯ ಅಡ್ಡ ಸ್ಥಿತಿಸ್ಥಾಪಕತ್ವದ ವಿನಿಮಯ ಪರಿಕಲ್ಪನೆಯನ್ನು ವಿವರಿಸಿ. ಎರಡು ಉತ್ಪನ್ನಗಳು ಪರಸ್ಪರ ಪೂರಕ, ಬದಲಿ ಹಾಗೂ ಅಸಂಬಂಧಿತ ವಾಗಿರಬೇಕಾದರೆ ಯಾವ ಷರತ್ತುಗಳು ಅಗತ್ಯ ?

**6.** ಗುಂಪುಗಳ ಮೂಲ ಸ್ವರೂಪವನ್ನು ಗುಂಪು ರಚನೆಯ ಪ್ರೇರಕಶಕ್ತಿಯನ್ನು ಹಾಗೂ ವಿವಿಧ ಮಾದರಿಯ ಸಮೂಹಗಳನ್ನು ವಿವರಿಸಿ.

**7.** ಪರಿಣಾಮಕಾರಿಯಾದ ಸಂವಹನಕ್ಕೆ ಇರುವ ಅಡಚಣೆಗಳೇನು ? ವಿವರಿಸಿ. ಸಂವಹನದ ಸಮಸ್ಯೆಗಳನ್ನು ನಿವಾರಿಸಲು ತದನುಭೂತಿ ಹೇಗೆ ಸಹಾಯಕವಾಗುತ್ತದೆ ?

**8.** ಕಾರ್ಯನೀತಿ ನಿರ್ಮಾಪಕರು ಒಂದು ರಾಷ್ಟ್ರದ ಉಳಿತಾಯ ಪ್ರಮಾಣವನ್ನು ಹೇಗೆ ಪ್ರಭಾವಿಸಬಹುದು ?

**9.** ಅಧಿಕಾರಶಾಹಿ ಮತ್ತು ಸೇಂದ್ರಿಯ ಸಂರಚನೆಗಳನ್ನು ವಿವರಿಸಿ ಮತ್ತು ವೈದೃಶ್ಯವನ್ನು ತಿಳಿಸಿ. ಸನ್ನಿವೇಶಾತ್ಮಕ ಸಂಗತಿಗಳು ಸಾಂಸ್ಥಿಕ ರಚನೆಯನ್ನು ಹೇಗೆ ಪ್ರಭಾವಿಸುತ್ತವೆ ಎಂಬುದನ್ನು ವಿವರಿಸಿ.

**10.** ಕೇಂದ್ರೀಯ ಪ್ರವೃತ್ತಿಯ ವಿವಿಧ ಮಾಪನಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

**11.** ನಾಯಕತ್ವದ ಪಥ-ಗುರಿ ಸಿದ್ಧಾಂತ ಎಂದರೇನು ? ಈ ಪರಿಕಲ್ಪನಾ ರಚನೆಯಲ್ಲಿ ನಾಯಕರ ಕರ್ತವ್ಯವೇನು ?

## PART C

*6×15=90*

*Answer each question in about 150 words. Each question carries 15 marks.*

**12.** Explain how management and social audits help focus organizational activities on constituents interests within an organization and outside it.

**13.** Discuss the strategic decisions underlying the capital budget.

**14.** Compare and contrast the traditional versus the new negotiation skills. Why do you think the new skills lead to better agreements ?

**15.** Discuss the distinctive features of the Binomial, Poisson and Normal distribution. How are these related to each other ?

**16.** Why must a firm have at least some power to discriminate ? What are the requirements for the practice of price discrimination ? Discuss the basic major degrees of price discrimination.

**17.** Discuss how motivation and leadership are interrelated and explain the role of decision making in effective leadership.

## ಭಾಗ C

*6×15=90*

*ಪ್ರತಿಯೊಂದು ಉತ್ತರವೂ 150 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 15 ಅಂಕಗಳು.*

**12.** ಒಂದು ಸಂಸ್ಥೆಯ ಒಳಗಡೆ ಮತ್ತು ಅದರ ಹೊರಗಡೆ ಘಟಕಾಂಶಗಳ ಆಸಕ್ತಿಗಳತ್ತ ಸಾಂಸ್ಥಿಕ ಚಟುವಟಿಕೆಗಳನ್ನು ಕೇಂದ್ರೀಕರಿಸಲು ನಿರ್ವಹಣೆ ಮತ್ತು ಸಾಮಾಜಿಕ ಪರಿಶೋಧನೆಗಳು ಹೇಗೆ ನೆರವಾಗುತ್ತವೆ ಎಂಬುದನ್ನು ವಿವರಿಸಿ.

**13.** ಬಂಡವಾಳ ಆಯವ್ಯಯ ಪತ್ರದ ಹಿನ್ನೆಲೆಯಲ್ಲಿರುವ ಆಯ ಕಟ್ಟಿನ ನಿರ್ಣಯಗಳನ್ನು ಕುರಿತು ಚರ್ಚಿಸಿ.

**14.** ಸಾಂಪ್ರದಾಯಿಕ ಮತ್ತು ಆಧುನಿಕ ಸಂಧಾನ ಕುಶಲತೆಗಳನ್ನು ಪರಸ್ಪರ ಹೋಲಿಸಿ ಮತ್ತು ಅವುಗಳ ವ್ಯತ್ಯಾಸಗಳನ್ನು ತಿಳಿಸಿ. ಆಧುನಿಕ ಕುಶಲತೆಗಳಿಂದ ಉತ್ತಮ ಒಪ್ಪಂದಗಳು ಸಾಧ್ಯ ಎಂಬ ಅಭಿಪ್ರಾಯಕ್ಕೆ ಕಾರಣವೇನು ?

**15.** ದ್ವಿಪದ, ಪಾಯ್‌ಸನ್ ಮತ್ತು ಸಹಜ ವಿತರಣೆಯ ವಿಶಿಷ್ಟ ಲಕ್ಷಣಗಳ ಬಗ್ಗೆ ಚರ್ಚಿಸಿ. ಇವುಗಳ ಪರಸ್ಪರ ಸಂಬಂಧ ಯಾವ ರೀತಿ ಇದೆ ಎಂದು ವಿವರಿಸಿ.

**16.** ಒಂದು ಉದ್ಯಮವು ಕನಿಷ್ಟ ಸ್ವಲ್ಪವಾದರೂ ವಿವೇಚನೆಯ ಅಧಿಕಾರ ಹೊಂದಿರುವುದು ಯಾಕೆ ಅಗತ್ಯ ? ಬೆಲೆ ವಿವೇಚನೆಯ ಪದ್ಧತಿಗೆ ಅಗತ್ಯವಾದ ಅಂಶಗಳೇನು ? ಬೆಲೆ ವಿವೇಚನೆಯ ಮೂಲ ಪ್ರಮುಖ ಹಂತಗಳನ್ನು ಕುರಿತು ಚರ್ಚಿಸಿ.

**17.** ಅಭಿಪ್ರೇರಣೆ ಮತ್ತು ನಾಯಕತ್ವ ಪರಸ್ಪರ ಹೇಗೆ ಸಂಬಂಧ ಪಡೆದಿವೆ ಎಂಬುದನ್ನು ಚರ್ಚಿಸಿ ಮತ್ತು ಪರಿಣಾಮಕಾರಿ ನಾಯಕತ್ವದಲ್ಲಿ, ನಿರ್ಣಯ ಕೈಗೊಳ್ಳುವುದರ ಪಾತ್ರವೇನು ಎಂಬುದನ್ನು ವಿವರಿಸಿ.

## PART D

*3×30=90*

*Answer any* ***three*** *of the following questions, each in about 300 words. Each question carries 30 marks.*

**18.** What is crowding out ? In the face of substantial crowding out, which will be most successful – fiscal or monetary policy ?

**19.** What is self-efficacy ? What are the major sources of self-efficacy ? How could each be used to enhance employee efficacy to increase performance ?

**20.** Describe the problems caused by multicollinearity and autocorrelation. Why should one be concerned about their effects on the regression results ?

**21.** What is the difference between gross domestic product (GDP) and gross national product (GNP) ? What determines the total production of goods and services ? How is national income distributed to the factors of production ? What determines the demand for goods and services ?

**22.** Define and discuss the stages of organizational evolution. How does not-for-profit status affect organizational structure ? What are the similarities and differences between service companies and manufacturers ?

## ಭಾಗ D

*3×30=90*

*ಕೆಳಗಿನ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವೂ 300 ಪದಗಳನ್ನು ಮೀರದಂತಿರಬೇಕು. ಪ್ರತಿ ಪ್ರಶ್ನೆಗೂ 30 ಅಂಕಗಳು.*

**18.** ಗುಂಪಾಗಿ ಹೊರಹೋಗು (Crowding out) ಎಂದರೇನು ? ಗಣನೀಯವಾದ ಗುಂಪಾಗಿ ಹೊರಹೋಗು (Crowding out) ಪರಿಸ್ಥಿತಿಯಲ್ಲಿ, ಅತ್ಯಂತ ಯಶಸ್ವಿಯಾದ ವಿತ್ತೀಯ ಅಥವಾ ಹಣಕಾಸಿನ ನೀತಿ ಯಾವುದು ?

**19.** ಸ್ವ-ಪರಿಣಾಮಕಾರಿತ್ವ ಎಂದರೇನು ? ಸ್ವಪರಿಣಾಮಕಾರಿತ್ವದ ಮುಖ್ಯ ಆಕರಗಳು ಯಾವುವು ? ಕಾರ್ಯನಿರ್ವಹಣೆಯನ್ನು ಹೆಚ್ಚಿಸುವುದಕ್ಕಾಗಿ ಉದ್ಯೋಗಿ ಪರಿಣಾಮಕಾರಿತ್ವವನ್ನು ವೃದ್ಧಿ ಪಡಿಸಲು ಈ ಪ್ರತಿಯೊಂದು ಅಂಶವನ್ನು ಹೇಗೆ ಬಳಸಿಕೊಳ್ಳ ಬಹುದು ?

**20.** ಬಹು ಏಕರೇಖೀಕತೆ ಹಾಗೂ ಸ್ವಯಂ ಏಕರೇಖೀಕತೆಗಳಿಂದ ಉಂಟಾಗುವ ಸಮಸ್ಯೆಗಳನ್ನು ವಿವರಿಸಿ. ಹಿಂಜರಿತದ ಫಲಿತಾಂಶಗಳ ಮೇಲೆ ಅವುಗಳ ಪರಿಣಾಮಗಳನ್ನು ಕುರಿತಂತೆ ಯಾಕೆ ಕಳವಳ ಪಡಬೇಕಾಗಿದೆ ?

**21.** ಸ್ಥೂಲ ಗೃಹ ಉತ್ಪನ್ನ (GDP) ಮತ್ತು ಸ್ಥೂಲ ರಾಷ್ಟ್ರೀಯ ಉತ್ಪನ್ನ (GNP) ಗಳ ನಡುವಿನ ವ್ಯತ್ಯಾಸವೇನು ? ಒಟ್ಟು ಸರಕುಗಳು ಮತ್ತು ಸೇವೆಗಳ ಉತ್ಪಾದನೆಯನ್ನು ಯಾವ ಅಂಶ ನಿರ್ಣಯಿಸುತ್ತದೆ ? ರಾಷ್ಟ್ರೀಯ ವರಮಾನವನ್ನು ಉತ್ಪಾದನಾ ಕಾರಕಗಳಿಗೆ ಹೇಗೆ ವಿತರಿಸಲಾಗುತ್ತದೆ ? ಸರಕುಗಳು ಮತ್ತು ಸೇವೆಗಳ ಬೇಡಿಕೆಯನ್ನು ಯಾವ ಅಂಶ ನಿರ್ಣಯಿಸುತ್ತದೆ ?

**22.** ಸಾಂಸ್ಥಿಕ ವಿಕಾಸದ ಹಂತಗಳನ್ನು ವಿವರಿಸಿ ಮತ್ತು ಚರ್ಚಿಸಿ. ಲಾಭಕ್ಕಾಗಿ ಅಲ್ಲ ಎಂಬ ಸ್ಥಿತಿಯು ಸಾಂಸ್ಥಿಕ ರಚನೆಗೆ ಹೇಗೆ ಧಕ್ಕೆ ಒಡ್ಡುತ್ತದೆ ? ಸೇವಾ ಸಂಸ್ಥೆಗಳು ಮತ್ತು ತಯಾರಿಕಾ ಸಂಸ್ಥೆಗಳ ನಡುವಿನ ಹೋಲಿಕೆಗಳೇನು ಮತ್ತು ವ್ಯತ್ಯಾಸಗಳೇನು ? ವಿವರಿಸಿ.

30/2

# 2008

## MANAGEMENT

### Paper 2

*Time : 3 Hours* ] [ *Maximum Marks : 300*

---

**INSTRUCTIONS**

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* **compulsory**.
*Answer any* **three** *questions in Part D.*

SEAL

---

*ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.*

## PART A

4×5=20

*Answer each question in about 50 words. Each question carries 5 marks.*

**1.** (a) Critically examine the BCG matrix as a strategic marketing tool.

(b) What are the scheduling problems in line production ?

(c) What is meant by pre-emptive labour relations ?

(d) What is free cash flow (FCF) ? Who is likely to be most interested in them ? Why ?

## ಭಾಗ A

*4×5=20*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಿಗೆ ಮೀರದಂತೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

1. (ಎ) ಆಯಕಟ್ಟಿನ ಮಾರುಕಟ್ಟೆ ಸಾಧನವಾಗಿ BCG ಮ್ಯಾಟ್ರಿಕ್ಸ್ ಅನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ.

   (ಬಿ) ಶ್ರೇಣಿ ಉತ್ಪಾದನೆಯಲ್ಲಿರುವ ಅನುಸೂಚಿಕೆಯ ಸಮಸ್ಯೆಗಳೇನು ?

   (ಸಿ) ಮೊದಲು ಕೊಳ್ಳುವಹಕ್ಕು (Pre-emptive) ಕಾರ್ಮಿಕ ಸಂಬಂಧಗಳು ಎಂದರೇನು ?

   (ಡಿ) ಮುಕ್ತ ನಗದು ಹರಿವು (FCF) ಎಂದರೇನು ? ಇವುಗಳಲ್ಲಿ ಯಾರಿಗೆ ಹೆಚ್ಚಿನ ಆಸಕ್ತಿ ಇರುವ ಸಾಧ್ಯತೆ ಇದೆ ಮತ್ತು ಯಾಕೆ ?

## PART B

*10×10=100*

*Answer each question in about 100 words. Each question carries 10 marks.*

**2.** What do we mean when we say the cost of capital is the opportunity cost ? Why are market value weights used instead of book value weights in computing a weighted average cost of capital ?

**3.** Explain the process of recruitment and selection in organizations.

**4.** What are the differences between process-focused and product-focused organizations ? Why do these differences occur ?

**5.** What is direct marketing ? Discuss the benefits of direct marketing to customers.

**6.** How does a firm's operating cycle differ from its cash conversion cycle ? Explain fully.

**7.** What is the aim of production planning ? Is it an integral part of the corporate planning process ?

**8.** Describe the role of product and service branding, packaging, labelling, and product support services.

**9.** Describe the functions of human resource management.

**10.** Distinguish between (a) Balance Sheet Leverage Ratios and (b) Coverage Ratios. Give two examples of each and indicate how they would be computed.

**11.** What is a Flexible Manufacturing System ? How is it related to the layout of physical facilities ?

## ಭಾಗ B

*10×10=100*

*ಪ್ರತಿಯೊಂದು ಉತ್ತರವೂ 100 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 10 ಅಂಕಗಳು.*

**2.** ಬಂಡವಾಳದ ವೆಚ್ಚವು ಅವಕಾಶ ವೆಚ್ಚವಾಗಿದೆ ಎಂದು ಹೇಳಿದರೆ ಅದರ ಅರ್ಥವೇನು ? ಬಂಡವಾಳದ ಗುರುತ್ವಕಾರಿ ಸರಾಸರಿ ವೆಚ್ಚವನ್ನು ಲೆಕ್ಕ ಮಾಡುವಾಗ ಪುಸ್ತಕ ಮೌಲ್ಯ ಗುರುತ್ವಗಳಿಗಿಂತ ಮಾರುಕಟ್ಟೆ ಮೌಲ್ಯ ಗುರುತ್ವಗಳನ್ನು ಬಳಸಲು ಕಾರಣವೇನು ?

**3.** ಸಂಸ್ಥೆಗಳಲ್ಲಿ ನೇಮಕಾತಿ ಮತ್ತು ಆಯ್ಕೆಗಳ ಪ್ರಕ್ರಿಯೆಯನ್ನು ವಿವರಿಸಿ.

**4.** ಪ್ರಕ್ರಿಯಾ ಕೇಂದ್ರಿತ ಮತ್ತು ಉತ್ಪನ್ನ ಕೇಂದ್ರಿತ ಸಂಸ್ಥೆಗಳ ನಡುವಿನ ವ್ಯತ್ಯಾಸವೇನು ? ಈ ವ್ಯತ್ಯಾಸಗಳು ಉಂಟಾಗಲು ಕಾರಣವೇನು ?

**5.** ನೇರ ಮಾರುಕಟ್ಟೆ ವ್ಯವಸ್ಥೆ ಎಂದರೇನು ? ಗ್ರಾಹಕರಿಗೆ ನೇರ ಮಾರುಕಟ್ಟೆ ವ್ಯವಸ್ಥೆಯಿಂದ ದೊರೆಯುವ ಲಾಭಗಳನ್ನು ಕುರಿತು ಚರ್ಚಿಸಿ.

**6.** ಒಂದು ಉದ್ಯಮ ಕಾರ್ಯಚರಣಾ ಚಕ್ರವು ಅದರ ನಗದು ಪರಿವರ್ತನಾ ಚಕ್ರಕ್ಕಿಂತ ಹೇಗೆ ಭಿನ್ನ ? ಇವನ್ನು ಪೂರ್ತಿಯಾಗಿ ವಿವರಿಸಿ.

**7.** ಉತ್ಪಾದನಾ ಯೋಜನೆಯ ಉದ್ದೇಶವೇನು ? ಇದು ಕಾರ್ಪೊರೇಟ್ ಯೋಜನಾ ಪ್ರಕ್ರಿಯೆಯ ಅವಿಭಾಜ್ಯ ಅಂಗವಾಗಿರುವುದೆ ?

**8.** ಉತ್ಪನ್ನ ಮತ್ತು ಸೇವೆಯ ಬ್ರ್ಯಾಂಡಿಂಗ್, ಪ್ಯಾಕೇಜಿಂಗ್, ಲೇಬಲಿಂಗ್ ಹಾಗೂ ಉತ್ಪನ್ನ ಬೆಂಬಲದ ಸೇವೆಗಳ ಪಾತ್ರವನ್ನು ವಿವರಿಸಿ.

**9.** ಮಾನವ ಸಂಪನ್ಮೂಲ ನಿರ್ವಹಣೆಯ ಕಾರ್ಯಗಳನ್ನು ವಿವರಿಸಿ.

**10.** (a) ಸಂತುಲನ ಪಟ್ಟಿಯ ಸನ್ನೆ ಕಾರ್ಯದ ಅನುಪಾತ ಹಾಗೂ (b) ಕಾಪು ಅನುಪಾತ (Coverage Ratios) ಗಳ ವ್ಯತ್ಯಾಸವನ್ನು ಸ್ಪಷ್ಟಪಡಿಸಿ. ಈ ಪ್ರತಿಯೊಂದಕ್ಕೂ ಎರಡೆರಡು ಉದಾಹರಣೆ ಕೊಡಿ ಮತ್ತು ಇವುಗಳನ್ನು ಹೇಗೆ ಲೆಕ್ಕಹಾಕಬಹುದು ಎಂಬುದನ್ನು ಸೂಚಿಸಿ.

**11.** ಬದಲಾಯಿಸಿಕೊಳ್ಳಬಹುದಾದ (ನಮ್ಯ) ತಯಾರಿಕಾ ವ್ಯವಸ್ಥೆ ಎಂದರೇನು ? ಭೌತಿಕ ಸೌಲಭ್ಯಗಳ ವಿನ್ಯಾಸಕ್ಕೆ ಇದು ಹೇಗೆ ಸಂಬಂಧಿಸಿದೆ ?

## PART C

*6×15=90*

*Answer each question in about 150 words. Each question carries 15 marks.*

**12.** Explain how companies can position their products for maximum competitive advantage in the marketplace.

**13.** Explain how quality and productivity are related. What are the costs associated with poor quality and poor productivity ?

**14.** Describe how the Net Present Value (NPV) and Internal Rate of Return (IRR) approaches are related. If the IRR for a given project exceeds a firm's hurdle rate, does that mean that the project necessarily has a positive NPV ? Explain.

**15.** Explain job analysis in a "jobless" world, including what it means and how it's done in practice.

**16.** Define consumerism and environmentalism and explain how they affect marketing strategies.

**17.** What is collective bargaining ? What major functions does this process perform in organizations ?

## ಭಾಗ C

*6×15=90*

*ಪ್ರತಿಯೊಂದು ಉತ್ತರವೂ 150 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 15 ಅಂಕಗಳು.*

12. ಮಾರುಕಟ್ಟೆ ಸ್ಥಳದಲ್ಲಿ ಗರಿಷ್ಠ ಸ್ಪರ್ಧಾತ್ಮಕ ಅನುಕೂಲ ಪಡೆಯುವುದು ಸಾಧ್ಯವಾಗುವಂತೆ ಕಂಪನಿಗಳು ತಮ್ಮ ಉತ್ಪನ್ನಗಳನ್ನು ಹೇಗೆ ಸ್ಥಾಪನೆ ಮಾಡಬೇಕು ? ವಿವರಿಸಿ.

13. ಗುಣ ಮತ್ತು ಉತ್ಪಾದಕತೆ ಹೇಗೆ ಸಂಬಂಧಿಸಿವೆ ಎಂಬುದನ್ನು ವಿವರಿಸಿ. ಕಳಪೆ ಗುಣ ಮತ್ತು ಕಳಪೆ ಉತ್ಪಾದಕತೆಗೆ ಸಂಬಂಧಿಸಿದ ವೆಚ್ಚಗಳು ಯಾವುವು ?

14. ನಿವ್ವಳ ಪ್ರಸ್ತುತ ಮೌಲ್ಯ (NPV) ಮತ್ತು ಆಂತರಿಕ ಆದಾಯ ದರ (IRR) ದೃಷ್ಟಿವಿಧಾನಗಳು ಹೇಗೆ ಸಂಬಂಧಿಸಿವೆ ಎಂಬುದನ್ನು ವಿವರಿಸಿ. ಒಂದು ನಿರ್ದಿಷ್ಟ ಪರಿಯೋಜನೆಯ IRR, ಉದ್ಯಮದ ಅಪವರ್ತನೆಯ ದರವನ್ನು ಮೀರಿದರೆ, ಪರಿಯೋಜನೆಯು ಅವಶ್ಯಕವಾಗಿ ಧನಾತ್ಮಕ NPV ಹೊಂದಿದೆ ಎಂದು ಅರ್ಥವೆ ? ವಿವರಿಸಿ.

15. "ಕಾರ್ಯರಹಿತ" ಪ್ರಪಂಚದ ಕಾರ್ಯ ವಿಶ್ಲೇಷಣೆಯನ್ನು ವಿವರಿಸಿ. ಜೊತೆಗೆ ಇದರ ಅರ್ಥವೇನು ? ಮತ್ತು ಅದನ್ನು ವಾಸ್ತವವಾಗಿ ಹೇಗೆ ನಡೆಸಲಾಗುತ್ತದೆ ಎಂಬುದನ್ನು ತಿಳಿಸಿ.

16. ಉಪಭೋಗವಾದ ಹಾಗೂ ಪರಿಸರಾತ್ಮಕವಾದಗಳನ್ನು ವಿವರಿಸಿ. ಇವು ಹೇಗೆ ಮಾರುಕಟ್ಟೆ ತಂತ್ರೋಪಾಯಗಳ ಮೇಲೆ ಪರಿಣಾಮ ಬೀರುತ್ತವೆ ಎಂಬುದನ್ನು ವಿವರಿಸಿ.

17. ಸಾಮೂಹಿಕ ಚೌಕಾಶಿ ಎಂದರೇನು ? ಸಂಸ್ಥೆಗಳಲ್ಲಿ ಈ ಪ್ರಕ್ರಿಯೆ ಯಾವ ಪ್ರಮುಖ ಕಾರ್ಯಗಳನ್ನು ನಿರ್ವಹಿಸುತ್ತದೆ ?

## PART D

3×30=90

*Answer any **three** of the following questions, each in about 300 words. Each question carries 30 marks.*

**18.** Explain the trade-off between retaining internally generated funds and paying cash dividends. What effect does dividend policy have on the share price in a perfect market ?

**19.** What are the major ways of entering a foreign market ? How can companies evaluate and select specific foreign markets to enter ? To what extent must the companies adapt its products and marketing programme to each foreign country ?

**20.** Compare and contrast performance management and performance appraisal. Discuss the pros and cons of performance appraisal tools.

**21.** Differentiate between direct and indirect costs of bankruptcy. What are the trade-offs in the Agency cost/tax-shield trade-off model ? How is the firm's optimal capital structure determined under the assumptions of this model ?

**22.** What are the assumptions underlying the classical economic order quantity (EOQ) model ? In the case when multiple number of items are procured, how would you apply the EOQ concepts to aggregate inventory control as opposed to individual items inventory control ?

## ಭಾಗ D

*3×30=90*

*ಕೆಳಗಿನ ಯಾವುದಾದರೂ* ***ಮೂರು*** *ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವೂ 300 ಪದಗಳನ್ನು ಮೀರದಂತಿರಬೇಕು. ಪ್ರತಿ ಪ್ರಶ್ನೆಗೂ 30 ಅಂಕಗಳು.*

**18.** ಆಂತರಿಕವಾಗಿ ಹುಟ್ಟುವಳಿಯಾದ ನಿಧಿಗಳನ್ನು ಉಳಿಸಿಕೊಳ್ಳುವುದು ಮತ್ತು ನಗದು ಲಾಭಾಂಶಗಳನ್ನು ಸಂದಾಯಮಾಡುವುದು, ಇವೆರಡರನಡುವಿನ ವ್ಯಾಪಾರವನ್ನು (Trade-off) ವಿವರಿಸಿ. ಲಾಭಾಂಶನೀತಿಯು ಒಂದು ಪರಿಪೂರ್ಣ ಮಾರುಕಟ್ಟೆಯಲ್ಲಿ ಶೇರು ಬೆಲೆಗಳ ಮೇಲೆ ಯಾವ ಪರಿಣಾಮಹೊಂದಿರುತ್ತದೆ ?

**19.** ಒಂದು ವಿದೇಶೀ ಮಾರುಕಟ್ಟೆಯನ್ನು ಪ್ರವೇಶಿಸುವ ಪ್ರಧಾನ ಮಾರ್ಗಗಳು ಯಾವುವು ? ಕಂಪನಿಗಳು ತಾವು ಪ್ರವೇಶಿಸುವ ನಿರ್ದಿಷ್ಟ ವಿದೇಶೀ ಮಾರುಕಟ್ಟೆಗಳನ್ನು ಹೇಗೆ ಮೌಲ್ಯಮಾಪನ ಮಾಡಬಹುದು ಮತ್ತು ಆಯ್ಕೆಮಾಡಬಹುದು ? ಕಂಪನಿಗಳು ಪ್ರತಿಯೊಂದು ಪರದೇಶಕ್ಕೆ ಅನುಗುಣವಾಗಿ ತಮ್ಮ ಉತ್ಪನ್ನಗಳು ಹಾಗೂ ಮಾರುಕಟ್ಟೆ ಕಾರ್ಯಕ್ರಮವನ್ನು ಎಷ್ಟರಮಟ್ಟಿಗೆ ಹೊಂದಿಸಿಕೊಳ್ಳಬೇಕು ?

**20.** ಕಾರ್ಯನಿರ್ವಹಣೆಯ ಆಡಳಿತ ಮತ್ತು ಕಾರ್ಯನಿರ್ವಹಣೆಯ ಮೌಲ್ಯಮಾಪನ ಇವೆರಡರ ಹೋಲಿಕೆಗಳು ಮತ್ತು ವ್ಯತ್ಯಾಸಗಳನ್ನು ತಿಳಿಸಿ. ಕಾರ್ಯ ನಿರ್ವಹಣಾ ಮೌಲ್ಯ ಮಾಪನ ಸಾಧನಗಳ ಸಾಧಕ ಬಾಧಕಗಳನ್ನು ಕುರಿತು ಚರ್ಚಿಸಿ.

**21.** ದಿವಾಳಿತನದ ಪ್ರತ್ಯಕ್ಷ ಮತ್ತು ಪರೋಕ್ಷ ವೆಚ್ಚಗಳ ವ್ಯತ್ಯಾಸವನ್ನು ಸ್ಪಷ್ಟಪಡಿಸಿ. ಏಜೆನ್ಸಿ ವೆಚ್ಚ/ತೆರಿಗೆ-ರಕ್ಷಣಾ ಟ್ರೇಡ್ ಆಫ್ ಮಾದರಿಯಲ್ಲಿನ ಟ್ರೇಡ್ ಆಫ್ ಗಳು ಯಾವುವು ? ಈ ಮಾದರಿಯ ಗ್ರಹಿಕೆಯ ಅನ್ವಯ ಉದ್ಯಮವೊಂದರ ಅನುಕೂಲತಮ ಬಂಡವಾಳ ರಚನೆಯನ್ನು ಹೇಗೆ ನಿರ್ಣಯಿಸಲಾಗುತ್ತದೆ ?

**22.** ಶಾಸ್ತ್ರೀಯವಾದ ಆರ್ಥಿಕ ಆದೇಶ ಪರಿಮಾಣ (EOQ) ಮಾದರಿಯ ಹಿನ್ನೆಲೆಯಲ್ಲಿರುವ ಗ್ರಹಿಕೆಗಳೇನು ? ಅನೇಕ ಸಂಖ್ಯೆಯ ಬಾಬ್ತುಗಳನ್ನು ತರಿಸಿಕೊಂಡಾಗ, ಪ್ರತ್ಯೇಕ ಬಾಬ್ತುಗಳ ತಪಶೀಲು ನಿಯಂತ್ರಣಕ್ಕೆ ಪ್ರತಿಯಾಗಿ ಒಟ್ಟು ತಪಶೀಲು ನಿಯಂತ್ರಣಕ್ಕೆ EOQ ಪರಿಕಲ್ಪನೆಗಳನ್ನು ಹೇಗೆ ಅನ್ವಯಿಸುತ್ತೀರಿ ?